ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February, 2024, Pp. 93-99.
©*IIMRD*, Mysuru

www.iimrd.com

# ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘಗಳ ಪಾತ್ರ

**ಪೂರ್ಣಿಮ ಎಸ್ ಎಸ್**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿನಿ, ರಾಜ್ಯಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ: (Abstract)**

*ಭಾರತೀಯ ಸಮಾಜದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ಆಳವಾಗಿ ಬೇರೂರಿದ್ದು ಸಾವಿರಾರು ವರ್ಷಗಳಿಂದ ಮಹಿಳೆಯರನ್ನು ಪುರುಷರ ಅಧೀನಳನ್ನಾಗಿ ಮಾಡಿಕೊಂಡು ಎಲ್ಲಾ ರೀತಿಯಲ್ಲಿಯೂ ಶೋಷಿಸುತ್ತಿರುವುದು ಸಾಮಾನ್ಯವಾಗಿ ಕಂಡುಬಂದಿರುತ್ತದೆ. ಮಹಿಳೆಯು ಪುರುಷನ ಕೈಗೊಂಬೆಯಲ್ಲ ಹಾಗೂ ಅವರಿಗೆ ಪೈಪೋಟಿಯೂ ಅಲ್ಲ. ಮಹಿಳೆ ಮತ್ತು ಪುರುಷರಿಬ್ಬರೂ ಸಮಾಜದ ಕಾನೂನಿನ ದೃಷ್ಟಿಯಲ್ಲಿ ಸಮಾನರು. ಮಹಿಳೆ ಮತ್ತು ಪುರುಷ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆಯೇ ಹೊರತು ಯಾರೊಬ್ಬರೂ ಮೇಲೂ ಅಲ್ಲ ಕೀಳೂ ಅಲ್ಲ ಎಂಬ ಗಾಂಧೀಜಿಯವರ ಆಶಯದಂತೆ ಮಹಿಳೆಯರನ್ನು ಸಮಾನವಾಗಿ ಕಾಣುವುದು ಪ್ರಸ್ತುತವೆನಿಸುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯರು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕವಾಗಿ ಸಮಾನರಾದಾಗ ಮಾತ್ರ ಸಮ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಪಾತ್ರವನ್ನು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಆರ್ಥಿಕ ಸಬಲೀಕರಣ, ಮಹಿಳೆ, ಸ್ವ–ಸಹಾಯ ಸಂಘಗಳು.

## ಪೀಠಿಕೆ

6ನೇ ಶತಮಾನದಿಂದ 12ನೇ ಶತಮಾನದವರೆಗೂ ಮಹಿಳೆಯರ ಸಾಮಾಜಿಕ ಸಮಾನತೆಗಾಗಿ ಹೋರಾಟ ಮಾಡಿದ ಮಹನೀಯರ ಕೊಡುಗೆಗಳನ್ನು ಶ್ಲಾಘಿಸಬಹುದಾಗಿದೆ. ಮಹಿಳೆಯರನ್ನು ಶಿಕ್ಷಿತರನ್ನಾಗಿ ಮಾಡಿದರೆ ಅವರ ಸಾಮಾಜಿಕ ಸಮಾನತೆ ಸಾಧ್ಯ ಎಂಬುದನ್ನು ಅರಿತ 19ನೇ ಶತಮಾನದ ಮಹಿಳಾ ಸಮಾಜದ ವಿಮೋಚಕರಾದ ಜ್ಯೋತಿ ಬಾ ಫುಲೆ ಮತ್ತು ಸಾವಿತ್ರಿ ಬಾ ಫುಲೆರವರ ಪಾತ್ರವು ಅಗ್ರಗಣ್ಯವಾದುದಾಗಿದೆ. ಆ ಮೂಲಕ ಅವರು ಸತ್ಯಶೋಧಕ ಸಮಾಜದ ಮಹತ್ತರ ಸುಧಾರಣಾ ಕ್ರಮಗಳನ್ನು ಮಹಿಳಾ ಸಮಾಜಕ್ಕೆ ಅಭೂತಪೂರ್ವ ಕೊಡುಗೆಗಳನ್ನು ನೀಡಿದ್ದಾರೆ.

ಮಹಿಳಾ ಸಬಲೀಕರಣದ ದೃಷ್ಟಿಯಿಂದಾಗಿ ಭಾರತೀಯ ಸಮಾಜದ ಬಹುತೇಕ ಸಮಾಜ ಸುಧಾರಕರು ಮಹಿಳೆಯರ ಮೇಲಿನ ದೌರ್ಜನ್ಯ, ದಬ್ಬಾಳಿಕೆ ಮತ್ತು ಶೋಷಣೆಗಳನ್ನು ತಪ್ಪಿಸುವಲ್ಲಿ ಸುಧಾರಣಾತ್ಮಕ

*Please cite this article as: ಪೂರ್ಣಿಮ ಎಸ್ ಎಸ್.* (2024). ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘಗಳ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ. 93–99.*

ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಹಾಗೆಯೇ ಮಹಿಳೆಯರ ಆರ್ಥಿಕ ಸಬಲೀಕರಣವು ಕೂಡ ಅತ್ಯಂತ ಮಹತ್ವದ ಘಟ್ಟ ಎಂಬುದನ್ನು ಅರಿತು ಸಮಾವೇಶಗಳು, ಅಂತರರಾಷ್ಟ್ರೀಯ ಮಹಿಳಾ ವಿಚಾರ ಸಂಕಿರಣಗಳು ಏರ್ಪಡಿಸುತ್ತಿರುವುದನ್ನು ಕಾಣಬಹುದಾಗಿದೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಇಂದಿಗೂ ಪುರುಷ ಪ್ರಾಧಾನ್ಯತೆ ಹೆಚ್ಚುತ್ತಿರುವುದರಿಂದ ಮಹಿಳೆಯರ ಶೋಷಣೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರಗಳು ಕಾನೂನುಗಳನ್ನು ಹಾಗೂ ಮಹಿಳಾ ಕಲ್ಯಾಣ ಕಾರ್ಯಕ್ರಮಗಳನ್ನು ಒದಗಿಸಿ ಕೊಡುತ್ತಿವೆ. ಜೊತೆಗೆ ಇಂತಹ ಮಹಿಳಾ ಪರವಾದ ಯೋಜನೆಗಳಿಗೆ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಸಹ ಕೈ ಜೋಡಿಸಿರುವುದನ್ನು ಕಾಣಬಹುದಾಗಿದೆ. ಅದರಲ್ಲಿಯೂ ಇತ್ತೀಚಿನ ದಿನಗಳಲ್ಲಿ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ದೃಷ್ಟಿಯಿಂದ ಸ್ತ್ರೀಯರ ಸ್ವ–ಸಹಾಯ ಗುಂಪುಗಳ ರಚನೆಗೆ ಸಾಕಷ್ಟು ಪ್ರಮಾಣದಲ್ಲಿ ಪೂರಕ ಯೋಜನೆಗಳನ್ನು ಸರ್ಕಾರಗಳು ರೂಪಿಸಿವೆ. ಈ ಎಲ್ಲಾ ಬೆಳವಣಿಗೆಯು ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ವಾವಲಂಬನೆಗೆ ಪೂರಕವಾಗಿದ್ದರೆ, ನಗರ ಪ್ರದೇಶಗಳಲ್ಲಿ ಗುಡಿಕೈಗಾರಿಕೆಗೆ ಸಂಬಂಧಿಸಿದ ಉಚಿತ ತರಬೇತಿಗಳನ್ನು ನೀಡಿ ಆ ಮೂಲಕ ಅವರು ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸಲು ಪ್ರೇರಣೆಯಾಗಿವೆ ಅಲ್ಲದೇ ನಗರ ಪ್ರದೇಶದ ಉದ್ಯೋಗಸ್ಥ ಮಹಿಳೆಯರ ಹಿತರಕ್ಷಣೆಗೆ ಸಂಬಂಧಿಸಿದ ಸಾಕಷ್ಟು ಭದ್ರತಾ ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ನಗರದ ಮಹಿಳೆಯರು ಸುಶಿಕ್ಷಿತಳಾಗಿರುವುದರಿಂದ ಆಕೆ ಸಾಕಷ್ಟು ಅನುಕೂಲಗಳನ್ನು ಪಡೆಯುವುದರೊಂದಿಗೆ ಆರ್ಥಿಕ ಸಬಲೀಕರಣ ಹೊಂದಿದ್ದಾರೆ.

ಗ್ರಾಮೀಣ ಪ್ರದೇಶದ ಮಹಿಳೆಯರು ಇಂದಿಗೂ ಕೃಷಿ ಸಂಬಂಧಿ ಹಾಗೂ ಮನೆಯ ಎಲ್ಲಾ ಆಗುಹೋಗುಗಳನ್ನು ನಿಭಾಯಿಸುತ್ತಿದ್ದರೂ, ಆರ್ಥಿಕವಾಗಿ ಯಾವುದೇ ರೀತಿಯ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ ಸಾಧಿಸಲು ಅವಕಾಶಗಳಿಲ್ಲದಂತಾಗಿದೆ. ಇಂತಹ ಸಂದರ್ಭದಲ್ಲಿ ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಹಾಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಬಲೀಕರಣದ ಧ್ಯೆಯೋದ್ಧೇಶಗಳನ್ನು ಗುರಿಯಾಗಿಟ್ಟುಕೊಂಡಿರುವ ಸರ್ಕಾರಗಳು ಗ್ರಾಮೀಣ ಸ್ತ್ರೀಯರ ಸ್ವ–ಸಹಾಯ ಗುಂಪುಗಳ ರಚನೆಗೆ ಹೆಚ್ಚು ಒತ್ತು ನೀಡಿ ಜಾರಿಗೊಳಿಸಲಾಗಿದೆ. ಮಹಿಳಾ ಸಬಲೀಕರಣದ ದೃಷ್ಟಿಯಿಂದಾಗಿ ಹಾಗೂ ಭವಿಷ್ಯದಲ್ಲಿ ಮಹಿಳೆಯರ ಆರ್ಥಿಕ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಗೂ ಮಹಿಳೆಯರ ಮೇಲಿನ ಶೋಷಣೆಗಳನ್ನು ತಡೆಗಟ್ಟುವ ಕಾನೂನುಗಳನ್ನು ಅನುಷ್ಠಾನಗೊಳಿಸಲಾಗಿದೆ. ಸಂಧ್ಯಾ ಸುರಕ್ಷಾಯೋಜನೆ, ಭಾಗ್ಯಲಕ್ಷ್ಮಿಯೋಜನೆ ಮತ್ತು ಸ್ತ್ರೀ ಸ್ವ–ಸಹಾಯ ಗುಂಪುಗಳು ಒಂದು ರೀತಿ ಸುಶಿಕ್ಷಿತ ಹೆಣ್ಣಿನ ಪರವಾಗಿವೆ ಎಂಬುದಾಗಿ ಹೇಳಬಹುದಾಗಿದೆ. ಇನ್ನೂ ಮುಂದುವರಿದು ಅವಿದ್ಯಾವಂತ ಹಾಗೂ ಬಡತನವನ್ನು ಎದುರಿಸುತ್ತಿರುವ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ನೆರವಾಗುವಂತಹ ಗ್ರಾಮೀಣ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯ ಪ್ರವೃತ್ತವಾಗಿರುವುದನ್ನು ಕಾಣಬಹುದಾಗಿದೆ. ಆದ್ದರಿಂದಾಗಿ ಪ್ರಸ್ತುತ ಲೇಖನವು ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘಗಳ ಪಾತ್ರವನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ.

**ಅಧ್ಯಯನದ ಉದ್ದೇಶಗಳು**

1. ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ತಿಳಿಯುವುದು.
2. ಮಹಾತ್ಮ ಗಾಂಧೀಜಿಯವರ ದೃಷ್ಟಿಕೋನದಲ್ಲಿ ಮಹಿಳೆಯರ ಆರ್ಥಿಕ ಸ್ವಾವಲಂಬಿತನವನ್ನು ವಿಶ್ಲೇಷಿಸುವುದು.
3. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಬ್ಯಾಂಕುಗಳ ಕಾರ್ಯ ನಿರ್ವಹಣೆಯನ್ನು ಗುರುತಿಸುವುದು.
4. ಮಹಿಳಾ ಸಮುದಾಯಗಳ ಆರ್ಥಿಕ ಸಬಲೀಕರಣಕ್ಕಾಗಿ ಸ್ತ್ರೀ ಸ್ವ–ಸಹಾಯ ಸಂಘಗಳ ಪಾತ್ರವನ್ನು ವಿಶ್ಲೇಷಿಸುವುದು.

**ಅಧ್ಯಯನದ ಪ್ರಾಕಲ್ಪನೆಗಳು:**

1. ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ಅರ್ಥೈಸಿಕೊಳ್ಳುವಲ್ಲಿ ವೈರುದ್ಯಗಳಿವೆ.
2. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರ ಶ್ಲಾಘನೀಯವಾದುದಾಗಿದೆ.
3. ಮಹಿಳೆಯರ ಆರ್ಥಿಕ ಅಭ್ಯುದಯದಲ್ಲಿ ಬ್ಯಾಂಕುಗಳ ಕಾರ್ಯ ನಿರ್ವಹಣೆಯಲ್ಲಿ ಇಚ್ಚಾಶಕ್ತಿಯ ಕೊರತೆಯಿದೆ.
4. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸ್ತ್ರೀ ಸ್ವ–ಸಹಾಯ ಸಂಘಗಳ ವಿಭಿನ್ನ ದೃಷ್ಟಿಕೋನಗಳಿವೆ.

**ಮಹಿಳಾ ಆರ್ಥಿಕ ಸಬಲೀಕರಣದ ಪ್ರಸ್ತುತತೆ**

ಭಾರತವು ಅತ್ಯಂತ ಹೆಚ್ಚು ಸಂಖ್ಯೆಯ ಗ್ರಾಮೀಣ ಪ್ರದೇಶಗಳನ್ನು ಹೊಂದಿರುವ ರಾಷ್ಟ್ರವಾಗಿದ್ದು, ದೇಶದ ಜನರು ಗ್ರಾಮೀಣ ರೀತಿ ನೀತಿ ಜೀವನ ವಿಧಾನಗಳನ್ನು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಗ್ರಾಮೀಣ ಪ್ರದೇಶದ ಜನರು ರೈತರು, ಕೃಷಿ ಕೂಲಿ ಕಾರ್ಮಿಕರು, ಕುಶಲ ಕರ್ಮಿಗಳು ಹಾಗೂ ಕೂಲಿ ಕೆಲಸ ನಿರ್ವಹಿಸುವ ಜನರನ್ನು ಗೌರವಿಸುವ ಅಗತ್ಯತೆಯನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶಗಳ ಜನರು ಶ್ರೀಮಂತ ಸಮುದಾಯಗಳ ಮುಂದೆ ಸ್ವಾಭಿಮಾನದಿಂದ ಬದುಕುವ ಕನಿಷ್ಟ ಆರ್ಥಿಕ ಸಾಮರ್ಥ್ಯವನ್ನು ಕಲ್ಪಿಸಿಕೊಡುವ ಅನಿವಾರ್ಯತೆಯನ್ನು ಕಾಣಬಹುದಾಗಿದೆ. ಗ್ರಾಮೀಣ ಜನರ ಸಮಸ್ಯೆಗಳ ಬಗ್ಗೆ ಜ್ಞಾನ ಮತ್ತು ಮಾಹಿತಿ ಒದಗಿಸುವ ಮೂಲಕ ಗ್ರಾಮೀಣ ಜನರ ಅಭಿವೃದ್ಧಿಗೆ ಪ್ರೇರೇಪಿಸುವುದು ಅಧ್ಯಯನದ ಪ್ರಾಮುಖ್ಯತೆಯಾಗಿದೆ. ಮಹಿಳೆಯರ ಸ್ಥಿತಿ ಪ್ರತಿಯೊಂದು ರಂಗಗಳಲ್ಲೂ ಸಮಾನಾಧಕರವಾಗಿರುವುದಿಲ್ಲ. ಏಕೆಂದರೆ, ಸಾಮಾನ್ಯವಾಗಿ ಕಡಿಮೆ ಕೂಲಿ ಪಡೆದು ಕಡಿಮೆ ಸ್ಥಾನದ ಉದ್ಯೋಗವನ್ನು ಹೊಂದಿದ್ದು ಹೆಚ್ಚು ಅವಧಿಯವರೆಗೆ ಕೆಲಸ ಮಾಡುತ್ತಿರುವುದರ ಜೊತೆಗೆ ಕೆಲಸದ ಸ್ಥಳದಲ್ಲಿಯೂ ಅನೇಕ ರೀತಿಯ ಸವಾಲುಗಳನ್ನು ಎದುರಿಸಬೇಕಾಗಿದೆ.

ಮಹಿಳೆಯು ತನ್ನ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿದ್ದು ಕಟ್ಟಿಗೆ, ನೀರು, ಅಡುಗೆ ಕೆಲಸ, ಮಕ್ಕಳ ಲಾಲನೆ ಪಾಲನೆ, ಪೋಷಣೆ ಮತ್ತು ಅಶಕ್ತರ ವೃದ್ದರ ಪಾಲನೆಯ ಸೇವನೆಯನ್ನು ಕೂಡ ಮಾಡಬೇಕಾಗಿದೆ. ಗಾಂಧೀಜಿಯವರ ದೃಷ್ಟಿಕೋನದಂತೆ ಮಹಿಳೆಯರ, ಬಡವರ ಮತ್ತು ದುರ್ಬಲ ವರ್ಗದ

ಹಾಗೂ ನಿರ್ಗತಿಕರ ಬಗ್ಗೆ ಅಪಾರವಾದ ಕಾಳಜಿಯನ್ನು ಸರ್ಕಾರಗಳು ಹೊಂದುವ ಮೂಲಕ ಅವರ ಆರ್ಥಿಕ ಅಭ್ಯುದಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಅದರಲ್ಲಿಯೂ ಗ್ರಾಮೀಣ ಭಾಗದ ಬಡತನ ರೇಖೆಯಲ್ಲಿರುವ ಮಹಿಳೆಯರ ಸಬಲೀಕರಣಕ್ಕಾಗಿ ಹೆಚ್ಚು ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು. ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಮಹಿಳೆಯರಿಗೆ ಸಾಲ ಸೌಲಭ್ಯಗಳನ್ನು ಅಲ್ಪ ಬಡ್ಡಿದರದಲ್ಲಿ ನೀಡಿ ಅವರು ಸ್ವಂತ ಆರ್ಥಿಕ ಚಟುವಟಿಕೆಗಳನ್ನು ನಡೆಸುವ ಮೂಲಕ ಸ್ವಾವಲಂಬಿಗಳಾಗಲು ಸಹಾಯಕವಾಗಬೇಕು. ಹಾಗೆಯೇ ಮಹಿಳೆಯರು ತಮ್ಮ ಸ್ವಾಭಿಮಾನ ವೃದ್ಧಿಸಿಕೊಳ್ಳಲು ಹೆಚ್ಚಿನ ರೀತಿಯಲ್ಲಿ ಸ್ವಯಂ ಉದ್ಯೋಗಗಳಂತಹ ಚಟುವಟಿಕೆಗಳಿಗೆ ಸಬ್ಸಿಡಿ ದರದಲ್ಲಿ ಸಾಲ ಸೌಲಭ್ಯಗಳನ್ನು ನೀಡಬೇಕು. ಮಹಿಳೆಯರು ವಾಣಿಜ್ಯ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಇಲ್ಲದಿರುವುದರಿಂದ ಕಡಿಮೆ ಬಡ್ಡಿ ದರದಲ್ಲಿ ಮತ್ತು ಅನುಕೂಲಕರ ಮರುಪಾವತಿ ವಿಧಾನದಲ್ಲಿ ವರಮಾನ ತಂದು ಸಾಮರ್ಥ್ಯದ ಚಟವಟಿಕೆಗಳಿಗೆ ಮತ್ತು ಕೃಷಿ ಅಭಿವೃದ್ಧಿ ಚಟುಟಿಕೆಗಳಿಗೆ ಸಾಲ ಒದಗಿಸಬೇಕು. ಗ್ರಾಮೀಣ ಮತ್ತು ನಗರ ಪ್ರದೇಶದ ಬಡ ಮಹಿಳೆಯರು ಸ್ತ್ರೀ ಸ್ವ–ಸಹಾಯ ಸಂಘಗಳನ್ನು ರಚಿಸಿಕೊಂಡು ಆ ಮೂಲಕ ತಮ್ಮ ಶ್ರೇಯೋಭಿವೃದ್ಧಿಗೆ ಪೂರಕವಾಗುವ ಹಣಕಾಸು ಬೆಂಬಲ ನೀಡಬೇಕಾಗಿದೆ.

1990ರಲ್ಲಿ ಮೊದಲ ಬಾರಿಗೆ ಗ್ರಾಮೀಣ ಮತು ನಗರ ಪ್ರದೇಶದ ಮಹಿಳೆಯರು ಬ್ಯಾಂಕುಗಳಿಂದ ಸಾಲ ಸೌಲಭ್ಯಗಳನ್ನು ಪಡೆಯುವ ಸಂದರ್ಭದಲ್ಲಿ ಎದುರಿಸುತ್ತಿದ್ದ ಕಷ್ಟ ಕಾರ್ಪಣ್ಯಗಳು ಬೆಳಕಿಗೆ ಬಂದವು. ಈಗಲೂ ಕೂಡ ಬ್ಯಾಂಕುಗಳು ಬಡತನ ರೇಖೆಯಲ್ಲಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರನ್ನು ಕಡೆಗಣಿಸುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಮಹಿಳೆಯರು ಸಹಾಯ ಧನದ ರೂಪದಲ್ಲಿ ಸಾಲ ಪಡೆಯುವವರೇ ಹೆಚ್ಚಾಗಿದ್ದಾರೆ ಆದರೆ, ಅವರಲ್ಲಿ ಹೆಚ್ಚಿನವರು ಅನಕ್ಷರಸ್ಥರು, ಅಜ್ಞಾನಿಗಳು, ನೈಪುಣ್ಯವನ್ನು ಹೊಂದಿಲ್ಲದವವರು, ಉಳಿತಾಯ ಸಾಮರ್ಥ್ಯ ಇಲ್ಲದವರು ಮತ್ತು ಪಡೆದ ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿ ಮಾಡುವ ಬದ್ಧತೆ ಮತ್ತು ಸಾಮರ್ಥ್ಯ ಇಲ್ಲದವರು ಎಂಬುದಾಗಿ ಬ್ಯಾಂಕುಗಳು ಗ್ರಹಿಸುವುದರಿಂದ ಹೆಚ್ಚಿನ ಗ್ರಾಮೀಣ ಮತ್ತು ನಗರ ಪ್ರದೇಶದ ಬಡ ಮಹಿಳೆಯರು ಬ್ಯಾಂಕ್ ಸಾಲ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

**ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘಗಳ ಕಾರ್ಯಪ್ರವೃತ್ತತೆ**

ಮಹಿಳೆಯರಲ್ಲಿ ಸ್ತ್ರೀ ಸ್ವ–ಸಹಾಯ ಸಂಘದ ಪರಿಕಲ್ಪನೆ ಒಂದು ನಿರ್ದಿಷ್ಟವಾದ ಧ್ಯೇಯ ಮತ್ತು ಉದ್ದೇಶವನ್ನು ಹೊಂದಿದ್ದು, ತಮಗೆ ತಾವೇ ಸಹಾಯವನ್ನು ಮಾಡಿಕೊಳ್ಳುವ ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನುಳ್ಳ, ಸಮಾನ ಆಸಕ್ತಿ ಮತ್ತು ಮನಸ್ಸನ್ನು ಹೊಂದಿರುವ ಹಾಗೂ ಸಮಾನ ಚಿಂತನೆಯಿರುವ 10 ರಿಂದ 20 ಸದಸ್ಯರನ್ನೊಳಗೊಂಡ ಜನರ ಒಂದು ಸಮೂಹವನ್ನು ಸ್ತ್ರೀ ಸ್ವ–ಸಹಾಯ ಗುಂಪು ಎಂದು ಕರೆಯಲಾಗುತ್ತದೆ. ಸ್ವ–ಸಹಾಯ ಸಂಘಗಳನ್ನು ಮೊಟ್ಟ ಮೊದಲ ಬಾರಿಗೆ ಬಾಂಗ್ಲಾದೇಶ, ಥೈಲ್ಯಾಂಡ್, ಇಂಡೋನೇಷಿಯಾ, ಫಿಲಿಫೈನ್ಸ್‌ನಲ್ಲಿ ಪ್ರಾರಂಭಿಸಲಾಯಿತು. ನಂತರ ಭಾರತದಲ್ಲಿ 1971ರಲ್ಲಿ ಭಾರತ ಮತ್ತು ಪಾಕಿಸ್ತಾನದ ಯುದ್ದದ ಸಂದರ್ಭದಲ್ಲಿ ಬಾಂಗ್ಲಾದೇಶದಿಂದ ಭಾರತಕ್ಕೆ ಬಂದ ನಿರಾಶ್ರಿತರು ತಮ್ಮ ಆರ್ಥಿಕ ಉನ್ನತಿಗಾಗಿ ಸ್ತ್ರೀ ಸ್ವ–ಸಹಾಯ ಸಂಘಗಳನ್ನು ರಚಿಸಿಕೊಂಡರು.

ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳ ಜಂಟಿ ಸಹಯೋಗದಲ್ಲಿ ಏಪ್ರಿಲ್ 1, 1999ರಂದು ಜಾರಿಗೆ ತಂದ ವಿಶಿಷ್ಟ ಯೋಜನೆ 'ಸ್ವರ್ಣಜಯಂತಿ ರೋಜ್ಗಾರ್ ಯೋಜನೆ' ಈ ಯೋಜನೆಯಡಿಯಲ್ಲಿ ಸ್ತ್ರೀ ಸ್ವ–ಸಹಾಯ ಗುಂಪುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಕರ್ನಾಟಕದಲ್ಲಿ ಸ್ತ್ರೀಯರನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಸಬಲೀಕರಣಗೊಳಿಸಲು 2000– 01ರಲ್ಲಿ ಎಸ್. ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರವು ಜಾರಿಗೆ ತಂದ 'ಸ್ತ್ರೀ–ಶಕ್ತಿ ಯೋಜನೆ'ಯನ್ನು ರಾಯಚೂರಿನಲ್ಲಿ ಉದ್ಘಾಟಿಸಲಾಯಿತು. ಈ ಯೋಜನೆಯೇ ಸ್ತ್ರೀ ಸ್ವ–ಸಹಾಯ ಸಂಘದ ಒಂದು ವಿಶಿಷ್ಟ ರೂಪವಾಗಿದೆ. ರಾಜ್ಯದಲ್ಲಿನ ಎಲ್ಲಾ ತಾಲ್ಲೂಕುಗಳು, ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀ ಶಕ್ತಿ ಗುಂಪುಗಳನ್ನು ರಚನೆ ಮಾಡಲಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ ಸುಮಾರು 1.30,000 ಸ್ತ್ರೀ ಶಕ್ತಿ ಗುಂಪಗಳು ರಚನೆಯಗಿದ್ದು 19ಲಕ್ಷ ಮಹಿಳೆಯರು ಸದಸ್ಯರಾಗಿದ್ದಾರೆ. ಈ ಸದಸ್ಯರು 971.84 ಕೋಟಿ ಹಣವನ್ನು ಉಳಿತಾಯ ಮಾಡಿದ್ದಾರೆ.

ಆಳುವ ಸರ್ಕಾರಗಳು ಬಡತನ ರೇಖೆಯಲ್ಲಿರುವ ಎಲ್ಲಾ ಸಮುದಾಯಗಳ ಮಹಿಳೆಯರಿಗೆ ಬಡತನ ನಿರ್ಮೂಲನ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಕೇವಲ ಅಲ್ಪ ಪ್ರಮಾಣದ ಯಶಸ್ಸನ್ನು ಸಾಧಿಸುತ್ತದೆ. ಏಕೆಂದರೆ, ಹೆಚ್ಚಿನ ಕಾರ್ಯಕ್ರಮಗಳು ನಿರ್ದಿಷ್ಟ ವರ್ಗಕ್ಕೆ ಮೀಸಲಾಗಿದ್ದು ಸಾಲ ಪಡೆಯುವಲ್ಲಿ ದೀರ್ಘಕಾಲೀನ ಪ್ರಕ್ರಿಯೆಗಳನ್ನು ಹೊಂದಿರುತ್ತವೆ. ಹೆಚ್ಚು ಪ್ರಮಾಣದ ಬ್ಯಾಂಕ್ ವ್ಯವಹಾರ ಶುಲ್ಕ, ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಕೊರತೆಯ ಕಾರಣಗಳಿಂದ ಸಾಲ ನೀಡುವ ರೀತಿ ನೀತಿಯನ್ನು ಬಡತನದಲ್ಲಿರುವ ಜನರಿಗೆ ಸಾಲ ನೀಡುವ ಸಂದರ್ಭದಲ್ಲಿ ಅನುಸರಿಸುವುದು ಮೂರ್ಖತನ ಪರಮಾವಧಿಯಾಗಿದೆ. ಆದ್ದರಿಂದ ಸ್ತ್ರೀ ಶಕ್ತಿ ಸ್ವ–ಸಹಾಯ ಸಂಘಗಳು ಬಡತನದಲ್ಲಿರುವ ದುರ್ಬಲ ಮತ್ತು ಅಸಂಘಟಿತ ವಲಯದಲ್ಲಿರುವ ಮಹಿಳೆಯರಿಗೆ ಸಾಲ ಒದಗಿಸುವ ಅಗತ್ಯವಿದೆ. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಸಹಾಯ ಮತ್ತು ಸಹಕಾರದಿಂದ ಸ್ತ್ರೀ ಸ್ವ–ಸಹಾಯ ತತ್ವದ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರು ಹಣಕಾಸು ಮತ್ತು ಆರ್ಥಿಕ ಬಲವನ್ನು ಪಡೆದು ಸ್ವಾವಲಂಬಿಗಳಾಗುವ ಮೂಲಕ ತಮ್ಮ ಅಸ್ತಿತ್ವವನ್ನು ಪ್ರದರ್ಶಿಸುವವರಾಗಿದ್ದಾರೆ. ಅನೇಕ ಮಹಿಳಾ ಅಧ್ಯಯನ ಮಾಹಿತಿಗಳ ಪ್ರಕಾರ, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಲಭ್ಯತೆ ಮತ್ತು ಮಹಿಳಾ ಆರ್ಥಿಕ ಸಬಲೀಕರಣದ ನಡುವೆ ಸಕಾರಾತ್ಮಕ ಪರಸ್ಪರ ಸಂಬಂಧ ಇರುತ್ತದೆ. ಸುಲಭ ಸಾಲ ಸೌಲಭ್ಯಗಳು ಮಹಿಳೆಯರ ಅನೇಕ ಅನುಕೂಲತೆಗಳನ್ನು ಒದಗಿಸುತ್ತದೆ. ಮಹಿಳೆಯರಿಗೆ ಆರ್ಥಿಕ ಸಬಲೀಕರಣವು ಮಾನವಶಾಸ್ತ್ರ ವಿಷಯವಾಗಿರುವುದರಿಂದ ಮಹಿಳಾ ಆರ್ಥಿಕ ಅಭಿವೃದ್ಧಿಯ ಗರಿಷ್ಠ ಉತ್ಪಾದನೆಯನ್ನು, ಪೂರ್ಣಉದ್ಯೋಗ ಸ್ಥಿತಿಗತಿಯನ್ನು ಮತ್ತು ಆರ್ಥಿಕ ಸಮಾನತೆಯನ್ನು ಸಾಮಾಜಿಕ ನ್ಯಾಯವು ಎತ್ತಿ ತೋರಿಸುತ್ತದೆ.

ಸ್ತ್ರೀ ಸ್ವ–ಸಹಾಯ ಸಂಘಗಳು ಹಲವಾರು ಉದ್ದೇಶಗಳನ್ನಿಟ್ಟುಕೊಂಡು ರೂಪಿತವಾಗಿವೆ. ಅವುಗಳೆಂದರೆ,

1. ಆರ್ಥಿಕ ಪ್ರಗತಿಯನ್ನು ಸಾಧಿಸುವುದು.
2. ಮಹಿಳೆಯರಲ್ಲಿ ಆತ್ಮ ವಿಶ್ವಾಸ ಮತ್ತು ಸ್ವಾವಲಂಬನೆ ಮೂಡಿಸುವುದು.
3. ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯುವಂತೆ ಅವಕಾಶ ಕಲ್ಪಿಸುವುದು.

4. ಸಾಲ ದೊರೆಯುವಂತೆ ಕ್ರಮ ಕೈಗೊಳ್ಳುವುದು.
5. ಸಾಮಾಜಿಕ ಬದಲಾವಣೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವುದು.
6. ಆದಾಯದ ಮಟ್ಟವನ್ನು ಹೆಚ್ಚಿಸುವುದಾಗಿದೆ.

ಸ್ತ್ರೀ ಸ್ವ–ಸಹಾಯ ಗುಂಪುಗಳ ರಚನೆಯ ಮೂಲ ಉದ್ದೇಶ ಬಡತನ ನಿವಾರಣೆ ಮತ್ತು ಪ್ರಗತಿ ಸಾಧನೆಯ ದಿಸೆಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರವೊಂದು ಅನುಸರಿಸಬಹುದಾಗಿದೆ. ಅಭಿವೃದ್ಧಿಯ ಪರ್ಯಾಯ ಕಾರ್ಯತಂತ್ರ ಎಂಬುದಾಗಿ ಹೇಳಬಹುದಾಗಿದೆ. ಅಲ್ಲದೇ ಸಾಮಾನ್ಯ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸ್ಫೂರ್ತಿಯನ್ನು ನೀಡುವಂತಹ ವ್ಯವಸ್ಥೆಯಲ್ಲಿ ಸ್ತ್ರೀ ಸ್ವ–ಸಹಾಯ ಗುಂಪು ಕಾರ್ಯ ಪ್ರವೃತ್ತವಾಗಿರುವುದನ್ನು ಗಮನಿಸಬಹುದಾಗಿದೆ. ಸಮಾನತೆಯ ಹಕ್ಕುಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಕರೆಕೊಟ್ಟ ಜಗತ್ತಿನ ಮೊದಲ ಸಂಸ್ಥೆಯಾಗಿ ವಿಶ್ವಸಂಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ವಿಶ್ವಸಂಸ್ಥೆಯ ಅಸ್ತಿತ್ವಕ್ಕೆ ಬಂದ 50 ವರ್ಷಗಳಲ್ಲಿ ಅದರ ಅಂತರರಾಷ್ಟ್ರೀಯ ಒಪ್ಪಂದವು ಲಿಂಗ ಸಮಾನತೆಯನ್ನು ಒಂದು ಮೂಲಭೂತ ಮಾನವ ಹಕ್ಕು ಎಂಬುದಾಗಿ ಘೋಷಿಸಿತು. ಆ ಮೂಲಕ ವಿಶ್ವಸಂಸ್ಥೆಯು ವಿಶ್ವದಾದ್ಯಂತ ಕಾರ್ಯಕ್ರಮಗಳನ್ನು, ಕಾರ್ಯತಂತ್ರಗಳನ್ನು ಮತ್ತು ಪೂರ್ವನಿರ್ಧಾರಿತ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ಸಾಕಷ್ಟು ಶ್ರಮಿಸುತ್ತಿದೆ.

**ಉಪಸಂಹಾರ**

ಅಂಗನವಾಡಿ ಕಾರ್ಯಕರ್ತೆಯರಿಂದ ಗ್ರಾಮ ಮಟ್ಟದಲ್ಲಿ ಸ್ತ್ರೀ ಸ್ವ–ಸಹಾಯ ಸಂಘಗಳನ್ನು ರಚಿಸಲಾಗಿದ್ದು, ಪ್ರತಿ ಸಂಘಗಳು ಸಾಮಾನ್ಯವಾಗಿ 15–20 ಮಹಿಳೆಯರನ್ನು ಒಳಗೊಂಡಿರುತ್ತದೆ. ತಳ ವರ್ಗಗಳ ಮಹಿಳೆಯರ ಆದ್ಯತೆ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರು, ಭೂರಹಿತ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮತ್ತು ಮದ್ಯವ್ಯಸನಿಗಳು, ಮಾದಕ ವ್ಯಸನಿಗಳು ಅಥವಾ ದೈಹಿಕವಾಗಿ ಅಂಗವಿಕಲ ವ್ಯಕ್ತಿಗಳಿರುವ ಕುಟುಂಬಗಳ ಮಹಿಳೆಯರನ್ನು ಒಂದುಗೂಡಿಸಿ ಈ ಸ್ತ್ರೀ ಶಕ್ತಿ ಸಂಘಗಳನ್ನು ರಚಿಸುವುದು ಮತ್ತು ಸಂಘಟಿಸುವುದು ಅಂಗನವಾಡಿ ಕಾರ್ಯಕರ್ತೆಯರ ಜವಾಬ್ದಾರಿಯಾಗಿರುತ್ತದೆ. ಈ ಸಂಘಗಳಲ್ಲಿ ಪ್ರತಿಯೊಬ್ಬ ಮಹಿಳೆಯರು ಉಳಿತಾಯವನ್ನು ಮಾಡುವುದರ ಮೂಲಕ ಪುಸ್ತಕದಲ್ಲಿ ದಾಖಲಿಸಲಾಗುತ್ತದೆ. ಸಂಗ್ರಹಿಸಿದ ಹಣವನ್ನು ಬ್ಯಾಂಕ್‌ನಲ್ಲಿ ಜಂಟಿ ಖಾತೆಯನ್ನು ತೆರೆದು ಇಡಲಾಗುತ್ತದೆ. ಸಂಘದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಂತರ ಸಂಘಕ್ಕೆ ಸಾಲ ನೀಡಲು ಪ್ರಾರಂಬಿಸಲಾಗುತ್ತದೆ. ಸಾಲದ ಮೊತ್ತವೂ ಅವರ ಬ್ಯಾಂಕ್ ಖಾತೆಯಲ್ಲಿನ ಉಳಿತಾಯವನ್ನು ಆಧರಿಸಿರುತ್ತದೆ. ಸಾಲದ ಚಟುವಟಿಕೆಗಳ ಹೊರತಾಗಿ ಟೈಲರಿಂಗ್, ನೇಯ್ಗೆ, ಅಗರಬತ್ತಿ ತಯಾರಿಕೆ, ಪಾಪಡ್ ತಯಾರಿಕೆ ಮುಂತಾದ ಆದಾಯ ಉತ್ಪಾದಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಂಘಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಸ್ತ್ರೀ ಸ್ವ–ಸಹಾಯ ಸಂಘದಡಿಯಲ್ಲಿ ತರಬೇತಿ, ಅಲ್ಪ ಪ್ರಮಾಣದ ಬಂಡವಾಳವನ್ನು ಒದಗಿಸುವುದು ಇವುಗಳ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದ ಸ್ತ್ರೀಶಕ್ತಿ ಸ್ವ–ಸಹಾಯ ಗುಂಪುಗಳ ರಚನೆಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಕೈಗೊಂಡ ಕ್ರಮಗಳು ಹಾಗೂ ಅನುಸರಿಸಿದ ಮಾರ್ಗೋಪಾಯಗಳು ಸಾಕಷ್ಟು ರೀತಿಯಲ್ಲಿ ಫಲಕಾರಿಯಾಗಿವೆ ಎಂದು ಹೇಳಬಹುದಾಗಿದೆ. ಇಂದಿನ

ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರು ಆರ್ಥಿಕವಾಗಿ ಸಬಲೀಕರಣ ಹೊಂದಲು ಉತ್ಸುಕರಾಗಿರುವ ಮೂಲಕ ಬ್ಯಾಂಕಿಂಗ್ ಕ್ಷೇತ್ರಗಳಿಗೆ ಹೆಚ್ಚಿನ ಆರ್ಥಿಕ ವಹಿವಾಟನ್ನು ಒದಗಿಸುತ್ತಿರುವುದು ಕಂಡುಬರುತ್ತಿದೆ.

**ಪರಾಮರ್ಶನ ಗ್ರಂಥಗಳು**

1. ಅನ್ನಪೂರ್ಣೇಶ್ವರಿ, ಎನ್. (2003). ಮಹಿಳಾ ಅಧ್ಯಯನಗಳು, ಆರ್ಥಿಕ ನೆಲೆಗಳು ಮತ್ತು ಆಯಾಮಗಳು. ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು.
2. ಗೀತಾ ಕೃಷ್ಣಮೂರ್ತಿ. (2007). ಮಹಿಳೆ, ಸಮಾಜ ಮತ್ತು ಕಾನೂನು. ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
3. ಕೃಷ್ಣಯ್ಯಗೌಡ, ಹೆಚ್ ಆರ್. (2004). ಸ್ವ–ಸಹಾಯ ಸಂಘಗಳು. ಗುರು ಕೃಪ ಪ್ರಕಾಶನ, ಮೈಸೂರು,
4. ಪೋರ್ ಸೆಲ್ವಿ ಪಿ. (2011). ಸ್ವ–ಸಹಾಯ ಸಂಘಗಳ ಮೂಲಕ ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಬೆಳವಣಿಗೆ. ಸದರನ್ ಎಕನಾಮಿಸ್ಟ್, ಬೆಂಗಳೂರು.
5. Ghadoliya, M.K. (2012). An increasing role SHGs in Women Empowerment, International Research Analysis, Volume 3.
6. Mukesh Arora. (2012). An increasing role SHGs in Women Empowerment, International Research Analysis, Volume 3,
7. Sanjay Kranti Das. (2012). Soci Economic Empowerment of Women through SHGs, A Boon for Development, International Journal, Volume-2, Jan-March.